# ದರ್ಪಣ

**ಜೊಲ್ಲೆ ಗ್ರೂಪ್**

**ವಾರ್ತಾ ಪತ್ರ**

(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)

ಜನೇವರಿ 2024–ಸಂಪುಟ–8 ಸಂಚಿಕೆ–2




## ಗಡಿಯ ಸಾಂಸ್ಕೃತಿಕ ಹಬ್ಬ
# ಪ್ರೇರಣಾ ಉತ್ಸವ–2023

ಕನ್ನಡ ನಾಡಿನಲ್ಲಿ ಅನೇಕ ಗ್ರಾಮಗಳಿವೆ ಅನೇಕ ಉದ್ದಿಮೆದಾರರಿದ್ದಾರೆ, ಅನೇಕ ಘನವಂತರು, ಸಿರಿವಂತರು ಇರುವುದುಂಟು ಆದರೆ ಆ ಸಿರಿವಂತಿಕೆ ಘನವಂತಿಕೆ ನಮಗಾಗಿ ಅಲ್ಲ ಅದು ಸಮಾಜ ಸೇವೆಗಾಗಿ, ಸಮಾಜದ ಅಭಿವೃದ್ಧಿಗೆ, ಸಂಸ್ಕೃತಿಯ ರಕ್ಷಣೆಗಾಗಿ ಎಂದು ತಿಳಿದು ಬದುಕುತ್ತಿರುವ ಗಡಿನಾಡಿನ ಆದರ್ಶ ಪರಿವಾರವೆಂದರೆ ಅದು ಜೊಲ್ಲೆ ಪರಿವಾರ.

**ಜೀವ ಹೋದ ಮೇಲೆ ದೇಹ ಮಣ್ಣುಪಾಲು**
**ಅಸ್ತಿಗಳು ಗಂಗೆ ಪಾಲು**
**ಆಸ್ತಿಗಳು ಮುಂದೆ ಕೂತು ಅಳುವವರ ಪಾಲು**
**ಮಗನು ಹಾಕುವ ಪಿಂಡ ಕಾಗೆಯ ಪಾಲು**
**ಅರಿಯದ ಜೀವ ಯಮನ ಪಾಲು**
**ನಾವು ಮಾಡುವ ಕಾಯಕ ಸಮಾಜ ಸೇವೆ ನಮ್ಮ ಪಾಲು**

ಎನ್ನುವ ಶರಣರ ಮಾತಿನಂತೆ ಕಾಯಕ ಪ್ರಜ್ಞೆಯಿಂದ ಸಮಾಜಮುಖಿ ಕಾಯಕ ಮಾಡುತ್ತಾ ನಾಡಿನ ತುಂಬ ಮನೆಮಾತಾದ ಆದರ್ಶ ದಂಪತಿಗಳೆಂದರೆ ಚಿಕ್ಕೋಡಿ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಮತ್ತು ನಿಪ್ಪಾಣಿ ಶಾಸಕರಾದ ಸೌ. ಶಶಿಕಲಾ ಜೊಲ್ಲೆಯವರು. ಇವರ ಹಾದಿಯಲ್ಲಿ ನಡೆದು ಸಮಾಜ ಸೇವೆ ಮಾಡುತ್ತಿರವವರು ಶ್ರೀ ಜ್ಯೋತಿಪ್ರಸಾದ ಜೊಲ್ಲೆ ಮತ್ತು ಸೌ ಪ್ರಿಯಾ ಜೊಲ್ಲೆ ಹಾಗೂ ಶ್ರೀ ಬಸವಪ್ರಸಾದ ಜೊಲ್ಲೆ ಹಿರಿಯ ಮಗನಾದ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಅವರ ಜನ್ಮದಿನದ ನಿಮಿತ್ಯ ಜೊಲ್ಲೆ ಗ್ರೂಪ್ ಪ್ರೇರಣಾ ಉತ್ಸವವನ್ನು ಆಯೋಜಿಸಿ ಗಡಿಯಲ್ಲಿ ಸಾಂಸ್ಕೃತಿಕ ಲೋಕವನ್ನೆ ಅನಾವರನಗೋಳಿಸಿದೆ.

ದೈವ ಒಂದು ಶಕ್ತಿ, ದಾನ ಇನ್ನೊಂದು ಶಕ್ತಿ ಆದರೆ ಇವೆಲ್ಲವುಗಳಿಗೆ ಮಿಗಿಲಾದ ಶಕ್ತಿ ಉತ್ಸಾಹ, ಇಂತಹ ಉತ್ಸಾಹ ಇದ್ದಾಗ ಮಾತ್ರ ಉತ್ಸವಗಳು ನೆರವೆರುತ್ತವೆ. ಇದು ಪ್ರೇರಣೆಯಿಂದ ಪ್ರಾರಂವಾಗುತ್ತದೆ. ಇಲ್ಲಿ ಜ್ಯೋತಿಪ್ರಸಾದರು ಆದಿಯಾಗಿದ್ದಾರೆ. ಗಡಿನಾಡಿಗೆ ಪ್ರೇರಣೆಯಾಗಿ ಜೊಲ್ಲೆ ಗ್ರೂಪ್‌ನ ಪ್ರೇರಣಾ ಶಕ್ತಿಯಾಗಿ ಬಲವಾಗಿ ನಿಂತಿದ್ದಾರೆ. ಜೊಲ್ಲೆ ಗ್ರೂಪ್‌ನ ಪ್ರೇರಣಾ ಉತ್ಸವ ನೊಂದವರ ಬಾಳಿನ ಬೆಳಕಾಗಿದ್ದು. ಹಳ್ಳಿಯ ವಿದ್ಯಾರ್ಥಿಗಳ ಮಹಿಳೆಯರ, ಯುವಕರ ಪ್ರತಿಭೆಗಳಿಗೆ ಪ್ರೊತ್ಸಾಹ ಪ್ರೇರಣೆ ನೀಡಿ ಪ್ರತಿಭೆ ಅನಾವರಣಗೋಳಿಸುವ ದಿವ್ಯ ವೇದಿಕೆಯಾಗಿದೆ.


**ಶ್ರೀ ಬೀರೇಶ್ವರ ಕೋ–ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ–ಸ್ಟೇಟ)**

ಕ್ರೀಯಾತ್ಮಕ ಹಾಗೂ ಪ್ರಗತಿಶೀಲ ಅರ್ಥವ್ಯವಸ್ಥೆ





**ಪ್ರೇರಣಾ ಪುರಸ್ಕಾರ**



12ನೇ ಪ್ರೇರಣಾ ಉತ್ಸವದ ಪ್ರೇರಣಾ ಪುರಸ್ಕಾರವನ್ನು ಸ್ಫೂರ್ತಿ ವಿಶೇಷ ಮಕ್ಕಳ ಶಾಲೆ ಮತ್ತು ತರಬೇತಿ ಕೇಂದ್ರ ಮೂಡಬಿದ್ರೆಯ ಸಂಸ್ಥಾಪಕರಾದ ಶ್ರೀ ಪ್ರಕಾಶ ಶೆಟ್ಟಿಗಾರ್ ಅವರಿಗೆ ಪ್ರೇರಣಾ ಪುರಸ್ಕಾರ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿರುವುದು.

ಹುಟ್ಟು ಆಕಸ್ಮಿಕ ಸಾವು ಅನಿವಾರ್ಯ ಇದರ ಮಧ್ಯೆ ಏನಾದರು ಸಾಧಿಸಬೇಕಾಗಿದ್ದು ಅಂತಕ ಸಾಧನೆಯನ್ನು ಜೊಲ್ಲೆ ಗ್ರೂಪ್‌ನ ರೂವಾರಿಗಳು ಮಾಡುತ್ತಿದ್ದರೆ. ವಿಕಲಚೇತನಾದರೂ ಸಮಾಜಮುಖಿ ಕಾಯಕದಲ್ಲಿ ನಿರತರಾವಾಗಿರುವ ಜ್ಯೋತಿಪ್ರಸಾದರು ವಿಶೇಷ ಮಕ್ಕಳ ನಿರ್ಗತೀಕರ ಆಶಾಕಿರಣರಾಗಿ ಪ್ರೇರಣಾದಾಯಕ ಮಹಾಮೇರುವಾಗಿದ್ದಾರೆ. ಜಗತ್ತಿಗೆ ಮಾದರಿಯಾದ ನವ್ಯ ಸಂಸ್ಕೃತಿಯುನ್ನು ಉಳಿಸಿ ಬೆಳಸಿಕೊಂಡು ಹೋಗಬೇಕಾಗಿದೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ನಾವು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಮಾರುಹೋಗುತ್ತಿದ್ದೆವೆ ಇಂತಹ ಸಮಯದಲ್ಲಿ ಜೊಲ್ಲೆ ಗ್ರೂಪ್ ಪ್ರತಿವರ್ಷ ಪ್ರೇರಣಾ ಉತ್ಸವ ಆಚರಿಸಿ ನಾಡಿನ ಪರಂಪರೆ ಸಂಸ್ಕೃತಿಯನ್ನು ಪ್ರೇರಿಪಿಸಿ ದೇಶಿಯ ಸಂಸ್ಕೃತಿ ಉಳಿಸುವಲ್ಲಿ ಮಹತ್ವದ ಕಾಯಕ ಮಾಡುತ್ತಿದೆ. ಪ್ರೇರಣಾ ಉತ್ಸವವು ಗಡಿನಾಡಿನ ಸಾಂಸ್ಕೃತಿಕ ಉತ್ಸವವಾಗಿ ಹೊರಹೊಮ್ಮುತಿದೆ. ನಾಡಿನ ಕಲೆಗಳ ಅನಾವರಣಗೋಳ್ಳುತ್ತದೆ. ಆದ್ಯಾತ್ಮ ಪರಂಪರೆಯ ಬಲವರ್ಧನೆಯಾಗುತ್ತದೆ. ಗುಗ್ಗುಳೋತ್ಸವ, ವೀರಗಾಸೆ, ನಂದಿಕೋಲು, ಗೊಂಬೆ ಕುಣಿತ ಸೇರಿದಂತೆ ನಾನಾ ವಾದ್ಯ ಮೇಳಗಳ ಮೆರವಣಿಗೆಯೊಂದಿಗೆ ಪ್ರೇರಣಾ ಉತ್ಸವಕ್ಕೆ ಚಾಲನೆ ನೀಡಲಾಗುತ್ತದೆ. ಗಡಿ ಭಾಗದ ಆರಾಧ್ಯ ದೈವ ಶ್ರೀ. ಜ್ಯೋತಿಬಾ ಮೂರ್ತಿಆರೂಢ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ರಂಗೋಲಿ ಸ್ಪರ್ಧೆ, ವಚನ, ಮಗ್ಗಿ ಕಂಠಪಾಠ, ಸಹಿತ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿ ಪ್ರತಿಭೆಗಳ ಅನಾವರಣಕ್ಕೆ ಈ ಉತ್ಸವ ನಾಂದಿ


(ಎರಡನೆ ಪುಟಕ್ಕೆ)

(ಒಂದನೆ ಪುಟದಿಂದ)

ಹಾಡುತ್ತದೆ. ವೃತ್ತಿ ಮಾರ್ಗದರ್ಶನ ಮಾಡಲಾಗುತ್ತದೆ. ಜೊಲ್ಲೆ ಗ್ರೂಪ್‌ನ ಪ್ರೇರಣಾ ಉತ್ಸವವು ಕಲೆಗಳ ಅನಾವರಣದ ವೇದಿಕೆಯಾಗಿ ನೊಂದ ಮನಸ್ಸುಗಳಿಗೆ ಆಧಾರವಾಗಿದೆ.

**ಕಾಯಬೇಕು ಒಳ್ಳೆಯ ದಿನಕ್ಕೆ**
**ಕುಗ್ಗಬಾರದು ಯಾವುದೇ ಕಾರಣಕ್ಕೆ**
**ಗೆಲವು ಒಳ್ಳೆಯತನಕ್ಕೆ**
**ತಲೆ ಬಾಗಬೇಡ ನೋವಿನ ಆಟಕ್ಕೆ**

ಎನ್ನುವ ಮಾತಿನಂತೆ ಪ್ರೇರಣಾ ಉತ್ಸವ ನಿಮಿತ್ಯ ಅಂಗವಿಕಲ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಬೆನ್ನುತಟ್ಟುತ್ತದೆ. ಅವರಿಗೆ ಪ್ರೇರಣಾ ಪುರಸ್ಕಾರ ನೀಡಿ ಗೌರವಿಸುತ್ತಿದೆ. ನಾಡಿನ ಹರಗುರು ಚರಮೂರ್ತಿಗಳ ಸನ್ನಿಧಾನದ ಭವ್ಯ ವೇದಿಕೆಯಲ್ಲಿ ವಿಶೇಷ ಚೇತನ ಸಾಧಕರನ್ನು ಗೌರವಿಸಲಾಗುತ್ತದೆ ಅದರಂತೆ ಈ ವರ್ಷ ಪ್ರೇರಣಾ ಉತ್ಸವ ಅದ್ದೂರಿಯಾಗಿ ನಡೆದು ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆಯ ಸ್ಪೂರ್ತಿ ವಿಶೇಷ ಮಕ್ಕಳ ಶಾಲೆ ಹಾಗೂ ತರಬೇತಿ ಕೇಂದ್ರದ ಶ್ರೀ ಪ್ರಕಾಶ ಜಿ. ಶೆಟ್ಟಿಗಾರ ಅವರಿಗೆ 2023ನೇ ಸಾಲಿನ ಜೊಲ್ಲೆ ಗ್ರೂಪ್‌ನ ಪ್ರೇರಣಾ ಪುರಸ್ಕಾರ ನೀಡಿ ಗೌರವಿಸಿದೆ.

ಗೌರವಾನ್ವಿತ ಜೊಲ್ಲೆ ದಂಪತಿಗಳು ಬಡವರ ನಿರ್ಗತಿಕರ ಅನಾಥರ ವಿಶೇಷ ಮಕ್ಕಳ, ಅಬಲೆಯರ ಧ್ವನಿಯಾಗಿ ಹೊರಹೊಮ್ಮಿದ್ದಾರೆ. ಎಲ್ಲಾ ರಂಗದಲ್ಲೂ ದಾಪುಗಾಲಿಟ್ಟು ಧರ್ಮದ ಹಾದಿಯಲ್ಲಿ ನಡೆಯುತ್ತಿದ್ದಾರೆ. ಸಮಾಜಮುಖಿ ಕಾಯಕ ಮಾಡುತ್ತಾ ಸಹಕಾರ ರತ್ನರಾಗಿ ಆದರ್ಶ ತಾಯಿಯಾಗಿ, ಕನ್ನಡ ನಾಡಿನ ಇತಿಹಾಸದಲ್ಲಿ ಅಚ್ಚಳಿಯದೇ ಉಳಿದಿದ್ದಾರೆ. ನೊಂದವರಿಗೆ ಆಸರೆಯಾಗಿ ಪ್ರತಿಭೆಗಳ ಅನಾವರಣದ ರೂವಾರಿಯಾಗಿದ್ದಾರೆ. ಸಂಸ್ಕೃತಿಕ ರಾಯಭಾರಿಯಾಗಿ ಗಡಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರೇರಣಾ ಉತ್ಸವದ ಕೇಂದ್ರ ಬಿಂದುವಾದ ಶ್ರೀ ಜ್ಯೋತಿ ಪ್ರಸಾದ ಜೊಲ್ಲೆಯವರ ಬದುಕು ಸಮಾಯಕ್ಕೆ ಒಂದು ಮಾದರಿಯಾಗಿದೆ. ಇವರನ್ನು ಕುರಿತು ಅಥಣಿ ಮೋಟಗಿ ಮಠದ ಗಡಿಕಾಯುವ ಕನ್ನಡ ಸಂತ ಶ್ರೀ. ಮ. ನಿ. ಪ್ರ. ಪೂ. ಪ್ರಭು ಚೆನ್ನಬಸವ ಮಹಾಸ್ವಾಮಿಗಳು ಕವನ ಹಾಡಿ ಜನ್ಮ ದಿನದ ಶುಭ ಕೋರಿದ್ದಾರೆ.

**ವೀರನಾದರೆ ಸಿಂಧೂರ ಲಕ್ಷ್ಮಣನಾಗು**
**ಶೂರನಾದರೆ ಪೌರವನಾಗು**
**ಛಲದಲ್ಲಿ ಚಾಲುಕ್ಯನಾಗು**
**ಕಲೆಯಲ್ಲಿ ರವಿವರ್ಮನಾಗು**
**ಪ್ರೇರಣೆಯಲ್ಲಿ ಜ್ಯೋತಿಪ್ರಸಾದನಾಗು ॥ಪ॥**
**ಅಹಿಂಸೆಯಲ್ಲಿ ಮಹಾವೀರನಾಗು**
**ಸತ್ಯದಲ್ಲಿ ಗಾಂಧಿಜಿಯಾಗು**
**ಶಾಂತಿಯಲ್ಲಿ ಏಸುಕ್ರಿಸ್ತನಾಗು**
**ಪ್ರೇರಣೆಯಲ್ಲಿ ಜ್ಯೋತಿಪ್ರಸಾದನಾಗು ॥ಪ॥**

ಈ ಮೇಲಿನ ಕವನ ಜ್ಯೋತಿಪ್ರಸಾದರ ಆದರ್ಶ ಬದುಕನ್ನು ಬಿಂಬಿಸುತ್ತದೆ. ಪ್ರೇರಣಾ ಉತ್ಸವ ನಾಡಿನ ಪ್ರೇರಣಾದಾಯಕ ಸಾಂಸ್ಕೃತಿಕ ಹಬ್ಬವಾಗಿ ಪರಿಣಮಿಸುತ್ತಿದ್ದೂ ಕಲೆಗಳ ಅನಾವರಣ, ಪ್ರತಿಭೆಗಳಿಗೆ ಆದರ ವೇದಿಕೆಯಾಗಿದೆ.

ಡಿಸೆಂಬರ 27, 28 ರಂದು ಗಡಿನಾಡಿನ ಯಕ್ಸಂಬಾದಲ್ಲಿ ನಡೆದ ಪ್ರೇರಣಾ ಉತ್ಸವ ಅದ್ದೂರಿಯಾಗಿ ತೆರೆಕಂಡು ನಾಡಿಗೆ ಪ್ರೇರಣೆಯ ಸಂದೇಶ ನೀಡಿತು. ಇದಕ್ಕೆ ಪ್ರೇರಕರಾದ ಜೊಲ್ಲೆ ಗ್ರೂಪ್‌ನ ಪ್ರೇರಣಾ ಶಕ್ತಿ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಅವರಿಗೆ ಜನ್ಮದಿನದ ಶುಭ ಕೋರಿ ಬಸವಾದಿ ಪ್ರಥಮರು, ಕನ್ನಡಾಂಬೆ ಅವರಿಗೆ ಉತ್ತಮ ಆರೋಗ್ಯ ದೀರ್ಘ ಆಯಸ್ಸು ಯಶಸ್ಸು ಕರುಣಿಸಲಿ ಎಂದು ಪ್ರಾರ್ಥಿಸುವೆ.

ಪ್ರೋ. ಮಿಥುನ ಅಂಕಲಿ
ಅಧ್ಯಕ್ಷರು ಅಖಿಲಭಾರತ ಶರಣರ ಸಾಹಿತ್ಯ
ಪರಿಷತ್ತು ತಾಲುಕಾ ಘಟಕ ನಿಪ್ಪಾಣಿ
ಕನ್ನಡ ಪ್ರಾಧ್ಯಾಪಕರು
ಬಸವಜ್ಯೋತಿ ಪದವಿ ಮಹಾವಿದ್ಯಾಲಯ, ನಣದಿ.

# ವಿಕಲಚೇತನರ ವಿಶ್ವ ದಿನ

ಡಿಸೆಂಬರ್ 3 ರಂದು ಆಚರಿಸಲಾಗುವ ವಿಕಲಾಂಗ ವ್ಯಕ್ತಿಗಳ ಅಂತರರಾಷ್ಟ್ರೀಯ ದಿನ 2023, ವಿವಿಧ ಅಂಗವೈಕಲ್ಯಗಳನ್ನು ಎದುರಿಸುತ್ತಿರುವ ವ್ಯಕ್ತಿಗಳಿಗೆ ತಿಳುವಳಿಕೆ ಮತ್ತು ಬೆಂಬಲವನ್ನು ಉತ್ತೇಜಿಸುವಲ್ಲಿ ವಿಶೇಷ ಪ್ರಾಮುಖ್ಯತೆಯನ್ನು ಹೊಂದಿದೆ.

ವಿಕಲಾಂಗ ವ್ಯಕ್ತಿಗಳ ಅಂತರರಾಷ್ಟ್ರೀಯ ದಿನ (IDPD) ಅಥವಾ ವಿಕಲಚೇತನರ ವಿಶ್ವ ದಿನ 2023, ವಾರ್ಷಿಕವಾಗಿ ಡಿಸೆಂಬರ್ 3 ರಂದು ಆಚರಿಸಲಾಗುತ್ತದೆ, ವಿವಿಧ ಅಂಗವೈಕಲ್ಯಗಳನ್ನು ಎದುರಿಸುತ್ತಿರುವ ವ್ಯಕ್ತಿಗಳಿಗೆ ತಿಳುವಳಿಕೆ ಮತ್ತು ಬೆಂಬಲವನ್ನು ಉತ್ತೇಜಿಸುವಲ್ಲಿ ವಿಶೇಷ ಪ್ರಾಮುಖ್ಯತೆಯನ್ನು ಹೊಂದಿದೆ.

1992ರಲ್ಲಿ ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿಯಿಂದ ಸ್ಥಾಪಿಸಲ್ಪಟ್ಟ ಈ ದಿನವು ವಿಕಲಾಂಗ ವ್ಯಕ್ತಿಗಳ ಘನತೆ, ಹಕ್ಕುಗಳು ಮತ್ತು ಒಟ್ಟಾರೆ ಯೋಗಕ್ಷೇಮಕ್ಕಾಗಿ ಪ್ರತಿಪಾದಿಸುವ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ.

### ವಿಕಲಾಂಗ ವ್ಯಕ್ತಿಗಳ ಅಂತರಾಷ್ಟ್ರೀಯ ದಿನ 2023 – ಥೀಮ್

2023 ರ ಅಂತರಾಷ್ಟ್ರೀಯ ವಿಕಲಾಂಗ ವ್ಯಕ್ತಿಗಳ ದಿನದ ಥೀಮ್, "ಅಂಗವಿಕಲ ವ್ಯಕ್ತಿಗಳಿಗೆ ಮತ್ತು ಅವರ ಮೂಲಕ SDG ಗಳನ್ನು ರಕ್ಷಿಸಲು ಮತ್ತು ಸಾಧಿಸಲು ಕ್ರಮದಲ್ಲಿ ಯುನೈಟೆಡ್", ಅನ್ವೇಷಣೆಯಲ್ಲಿ ವಿಕಲಾಂಗ ವ್ಯಕ್ತಿಗಳನ್ನು ಸೇರಿಸುವುದನ್ನು ಖಚಿತಪಡಿಸಿಕೊಳ್ಳಲು ಸಾಮೂಹಿಕ ಕ್ರಿಯೆಯ ತುರ್ತು ಅಗತ್ಯವನ್ನು ಒತ್ತಿಹೇಳುತ್ತದೆ. ಸುಸ್ಥಿರ ಅಭಿವೃದ್ಧಿ ಗುರಿಗಳ SDG ಗಳ ಯಶಸ್ಸಿಗೆ ಒಳಗೊಳ್ಳುವಿಕೆ ಅವಿಭಾಜ್ಯವಾಗಿದೆ ಎಂದು ಗುರುತಿಸಿ, ಈ ಜಾಗತಿಕ ಉದ್ದೇಶಗಳನ್ನು ಸಾಧಿಸುವ ನಿಟ್ಟಿನಲ್ಲಿ ಕೆಲಸ ಮಾಡುವಲ್ಲಿ ಸಹಯೋಗ ಮತ್ತು ಒಗ್ಗಟ್ಟನ್ನು ಇದು ಒತ್ತಿಹೇಳುತ್ತದೆ.

### ಇತಿಹಾಸ

1992 ರಲ್ಲಿ UN ಜನರಲ್ ಅಸೆಂಬ್ಲಿಯ ನಿರ್ಣಯ 47/3 ಕ್ಕೆ ಹಿನ್ನಲೆಯಲ್ಲಿ ವಿಕಲಾಂಗ ವ್ಯಕ್ತಿಗಳ ಅಂತರಾಷ್ಟ್ರೀಯ ದಿನದ ಮೂಲಗಳು. ಈ ನಿರ್ಣಯವು ಅಂಗವೈಕಲ್ಯ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಲು ಮತ್ತು ಜೀವನದ ಎಲ್ಲಾ ಅಂಶಗಳಲ್ಲಿ ವಿಕಲಾಂಗ ವ್ಯಕ್ತಿಗಳನ್ನು ಸೇರಿಸಿಕೊಳ್ಳಲು ಬೆಂಬಲವನ್ನು ಒಟ್ಟುಗೂಡಿಸಲು ಸಾಮೂಹಿಕ ಬದ್ಧತೆಯನ್ನು ಗುರುತಿಸಿದೆ. ವರ್ಷಗಳಲ್ಲಿ, ಆಚರಣೆಯು ಜಾಗತಿಕ ಉಪಕ್ರಮವಾಗಿ ವಿಕಸನಗೊಂಡಿದೆ, ರಾಷ್ಟ್ರಗಳು, ನಾಗರಿಕ ಸಮಾಜ ಸಂಸ್ಥೆಗಳು ಮತ್ತು ಖಾಸಗಿ ವಲಯವನ್ನು ತೊಡಗಿಸಿಕೊಂಡಿದೆ.

### ಮಹತ್ವ

IDPD ಯ ಪ್ರಾಥಮಿಕ ಉದ್ದೇಶವು ವಿಕಲಾಂಗ ವ್ಯಕ್ತಿಗಳನ್ನು ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಂಯೋಜಿಸುವುದರಿಂದ ಉಂಟಾಗುವ ಪ್ರಯೋಜನಗಳ ಅರಿವನ್ನು ಹೆಚ್ಚಿಸುವುದು. ಇದು ವಿಕಲಾಂಗ ವ್ಯಕ್ತಿಗಳ ಸಾಧನೆಗಳನ್ನು ಆಚರಿಸಲು, ಅವರು ಎದುರಿಸುತ್ತಿರುವ ಸವಾಲುಗಳನ್ನು ಗುರುತಿಸಲು ಮತ್ತು ಹೆಚ್ಚು ಒಳಗೊಳ್ಳುವ ಪ್ರಪಂಚದ ಕಡೆಗೆ ಒಟ್ಟಾಗಿ ಕೆಲಸ ಮಾಡುವ ದಿನವಾಗಿದೆ.

# ವಿಶ್ವ ಕಂಪ್ಯೂಟರ್ ಸಾಕ್ಷರತಾ ದಿನ

ಸ್ಟೀವ್ ಜಾಬ್ಸ್ ಒಮ್ಮೆ ಹೇಳಿದರು, " ಕಂಪ್ಯೂಟರ್‌ಗಳು ಮತ್ತು ಇನ್ನೂ ಅಭಿವೃದ್ಧಿಪಡಿಸಬೇಕಾದ ಸಾಫ್ಟ್‌ವೇರ್, ನಾವು ಕಲಿಯುವ ರೀತಿಯಲ್ಲಿ ಕ್ರಾಂತಿಯನ್ನುಂಟುಮಾಡುತ್ತದೆ" ಮತ್ತು ಡಿಜಿಟಲ್ ಕ್ರಾಂತಿಯು ಬರವಣಿಗೆ ಅಥವಾ ಮುದ್ರಣದ ಆವಿಷ್ಕಾರಕ್ಕಿಂತ ಹೆಚ್ಚು ಮಹತ್ವದ್ದಾಗಿರುವುದರಿಂದ ನಾವು ಸಂಪೂರ್ಣವಾಗಿ ಒಪ್ಪುತ್ತೇವೆ. ಈ ರೀತಿಯ ಕಲಿಕೆಯನ್ನು ಆಚರಿಸಲು, ವಿಶ್ವ ಕಂಪ್ಯೂಟರ್ ಸಾಕ್ಷರತಾ ದಿನವನ್ನು ಪ್ರಪಂಚದಾದ್ಯಂತ ವಾರ್ಷಿಕವಾಗಿ ಆಚರಿಸಲಾಗುತ್ತದೆ ಮತ್ತು ಅದರ ಬಗ್ಗೆ ನೀವು ತಿಳಿದುಕೊಳ್ಳಬೇಕಾದದ್ದು ಇಲ್ಲಿದೆ.

**ಇತಿಹಾಸ:**

ಭಾರತೀಯ ಬಹುರಾಷ್ಟ್ರೀಯ ಸಂಸ್ಥೆಯಾದ NIIT ತನ್ನ 20 ನೇ ವಾರ್ಷಿಕೋತ್ಸವವನ್ನು ಗುರುತಿಸಲು ಪ್ರಾರಂಭಿಸಿತು, ವಿಶ್ವ ಕಂಪ್ಯೂಟರ್ ಸಾಕ್ಷರತಾ ದಿನವನ್ನು ಮೊದಲ ಬಾರಿಗೆ 2001 ರಲ್ಲಿ ಆಚರಿಸಲಾಯಿತು, ಅಲ್ಲಿ ಚರ್ಚೆಯ ವಿಷಯವು ಕಂಪ್ಯೂಟರ್ ಬಳಕೆಯಲ್ಲಿ ನಿರರ್ಗಳವಾಗಿ ಪುರುಷರು ಎಂದು ಸೂಚಿಸುವ ಸಂಶೋಧನೆಯಾಗಿದೆ.

ಈ ದಿನವು ಈಗ ಕಂಪ್ಯೂಟರ್ ಶಿಕ್ಷಣದ ಪ್ರಾಮುಖ್ಯತೆ ಯನ್ನು ಒತ್ತಿಹೇಳುತ್ತದೆ ಮತ್ತು ಪ್ರಪಂಚದಾದ್ಯಂತದ ಜನರು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳ ಪ್ರವೇಶವನ್ನು ಮತ್ತು ಜ್ಞಾನವನ್ನು ಹೊಂದಿದ್ದಾರೆ ಮತ್ತು ಕಂಪ್ಯೂಟರ್ ಸಾಕ್ಷರತೆ ಮತ್ತು ಡಿಜಿಟಲ್ ಕೌಶಲ್ಯಗಳನ್ನು ಉತ್ತೇಜಿಸುವ ಜಾಗತಿಕ ಉಪಕ್ರಮವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಖಚಿತ ಪಡಿಸಿಕೊಳ್ಳುವ ಮೂಲಕ ಡಿಜಿಟಲ್ ವಿಭಜನೆಯನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿದೆ.

**ಮಹತ್ವ:**

ನಾವು ವಾಸಿಸುತ್ತಿರುವ ಹೆಚ್ಚುತ್ತಿರುವ ಡಿಜಿಟಲ್ ಪ್ರಪಂಚದ ಸಂದರ್ಭದಲ್ಲಿ ಪ್ರಾಮುಖ್ಯತೆಯನ್ನು ಹೊಂದಿರುವ ವಿಶ್ವ ಕಂಪ್ಯೂಟರ್ ಸಾಕ್ಷರತಾ ದಿನವು ಆಧುನಿಕ ಸಮಾಜದಲ್ಲಿ ಕಂಪ್ಯೂಟರ್ ಸಾಕ್ಷರತೆಯ ಪ್ರಾಮುಖ್ಯತೆಯ ಜ್ಞಾಪನೆಯಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಎಲ್ಲಾ ವಯಸ್ಸಿನ ಮತ್ತು ಹಿನ್ನಲೆಯ ಜನರಿಗೆ ಕಂಪ್ಯೂಟರ್ ಶಿಕ್ಷಣದ ಪ್ರವೇಶವನ್ನು ಒದಗಿಸುವ ಪ್ರಯತ್ನಗಳನ್ನು ಉತ್ತೇಜಿಸುತ್ತದೆ.

ವ್ಯಕ್ತಿಗಳು ಡಿಜಿಟಲ್ ಆರ್ಥಿಕತೆಯಲ್ಲಿ ಭಾಗವಹಿಸಲು, ಮಾಹಿತಿಯನ್ನು ಪ್ರವೇಶಿಸಲು ಮತ್ತು ಅವರ ಒಟ್ಟಾರೆ ಜೀವನದ ಗುಣಮಟ್ಟವನ್ನು ಹೆಚ್ಚಿಸಲು ಕಂಪ್ಯೂಟರ್ ಸಾಕ್ಷರತೆಯು ನಿರ್ಣಾಯಕವಾಗಿದೆ, ಇದನ್ನು ಉತ್ತೇಜಿಸಲು, ವಿವಿಧ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಮುದಾಯಗಳು ಈ ದಿನದಂದು ಕಂಪ್ಯೂಟರ್ ಸಾಕ್ಷರತೆಯನ್ನು ಉತ್ತೇಜಿಸಲು ಕಾರ್ಯಕ್ರಮಗಳು, ಕಾರ್ಯಾಗಾರಗಳು ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತವೆ.



ಜೊಲ್ಲೆ ಶಿಕ್ಷಣ ಸಂಸ್ಥೆಯ ಬಸವಜ್ಯೋತಿ ಕಲಾ ವಾಣಿಜ್ಯ ಮತ್ತು ವಿಜ್ಞಾನ ಪದವಿ ಪೂರ್ವ ಕಾಲೇಜು ಯಕ್ಸಂಬಾ, ದಿನಾಂಕ 24–11–2023 ರಂದು ಶ್ರೀ ಕಂಠೀರವ ಅಥ್ಲೆಟಿಕ್ಸ್ ಕ್ರೀಡಾಂಗಣ ಸಂಪಂಗಿರಾಮನಗರ, ಬೆಂಗಳೂರಿನಲ್ಲಿ ನಡೆದ ಪದವಿ ಪೂರ್ವ ಕಾಲೇಜುಗಳ ರಾಜ್ಯ ಮಟ್ಟದ ವೈಯಕ್ತಿಕ (ಅಥ್ಲೆಟಿಕ್ಸ್) ಕ್ರೀಡಾಕೂಟದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಯಾದ ಕುಮಾರ ವಿನಾಯಕ. ಎಸ್ ಈಟಿ. ಭಾಗವಹಿಸಿ ಕ್ರಾಸ್ ಕಂಟ್ರಿ ಓಟದಲ್ಲಿ ರಾಷ್ಟ್ರಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆ ಆಗಿರುತ್ತಾನೆ. ಆಯ್ಕೆಯಾದ ವಿದ್ಯಾರ್ಥಿಗೆ ಸಂಸ್ಥೆಯ ಸಂಸ್ಥಾಪಕರು, ಅಧ್ಯಕ್ಷರು, ಆಡಳಿತ ಮಂಡಳಿಯ ಸದಸ್ಯರು, ಪ್ರಾಚಾರ್ಯರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳಿಂದ ಹಾರ್ದಿಕ ಅಭಿನಂದನೆಗಳು.

ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಯಕ್ಸಂಬಾ




## ನಡೆದಾಡುವ ದೇವರಿಗೆ ನುಡಿ ನಮನ

ಸಂತರಲ್ಲಿ ಶ್ರೇಷ್ಠ ಸಂತರಾಗಿ
ಜ್ಞಾನ ಯೋಗಾಶ್ರಮದ ಜ್ಞಾನದ ಯೋಗಿಗಳಾಗಿ
ಶ್ರೀ ಕ್ಷೇತ್ರ ವಿಜಯಪುರದ ವಿಜಯಿಯಾಗಿ
ಭಕ್ತರ ಪಾಲಿಗೆ ಪರಮ ಜ್ಯೋತಿಯಾಗಿ
ಜಗತ್ತನ್ನೇ ಬೆಳಗಿದವರು..........

ಕಾಯಕ ತತ್ವದ ಅನು ಪಾಲಕರಾಗಿ
ಜ್ಞಾನ ಪ್ರವಚನದ ಹರಿಕಾರರಾಗಿ
ಕೃತಿ ಮಂತ್ರ ಗೋಪ್ಯಗಳ, ವಚನಗಳನ್ನು ರೂಪಕರಾಗಿ
ಸಾಧ್ವಿನಯ ಸ್ವಾಭಿಮಾನದ ಸೆಳೆಯಾಗಿ
ಕಲಿಯುಗದ ನಡೆದಾಡುವ ದೇವರಾಗಿ ಬಾಳಿದವರು.........

ಸರಳತೆಯ ಸೂತ್ರ ಅರಿತು ನಡೆದವರು
ಸರಳ ಸಜ್ಜನಿಕೆಯ ಸಾಕಾರ ಮೂರ್ತಿಯಾಗಿ
ಸ್ಥಾವರಕ್ಕೆ ಅಳಿವುಂಟು ಎಂದು ಸಾರಿದ್ದೀರಿ,
ಜಂಗಮಕ್ಕೆ ಅಳಿವಿಲ್ಲವೆಂದು ತೋರಿದಿರಿ
ಬದುಕಿನ ನೈಜ ಮೌಲ್ಯವನ್ನು ತೋರಿ ಬಾಳಿದವರು......

ವೈಕುಂಠ ಏಕಾದಶಿ ದಿನ ದೇಹ ಲೀನಗೊಳಿಸಿದವರು
ಅನಂತದ ಜ್ವಾಲೆಯ ಅನಂತದಿ ಲೀನರಾಗಿ
ಜ್ವಾಲೆಯ ಬಸ್ಮವು ಪುಣ್ಯ ನದಿಗಳಲ್ಲಿ ಲೀನರಾಗಿ
ಯಾವುದೇ ಪೂಜೆ, ಗುಡಿ ಗೋಪುರವನ್ನು ತಿರಸ್ಕರಿಸಿ
ಜ್ಞಾನ, ಭಕ್ತಿಯ ಮೂಲಕ ಭಕ್ತರ ಹೃದಯಗಳಲ್ಲಿ
ಅಮರವಾಗಿ ಉಳಿದಿರುವಿರಿ.........

ಶ್ರೀ. ರಾಮಚಂದ್ರ ಸನದಿ
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಇಡಿ.)
ಶಿಕ್ಷಣ ಮಹಾವಿದ್ಯಾಲಯ, ನಣದಿ



**ನೂತನ ಶಾಖೆ ಉದ್ಘಾಟನೆ**

ಗೋವಾ ರಾಜ್ಯದ ಪೊಂಡಾ ನಗರದಲ್ಲಿ ಶ್ರೀ ಬೀರೇಶ್ವರ ಕೋ-ಆಪ್ ಕ್ರೆಡಿಟ್ ಸೋಸಾಯಿಟಿ ಲಿ.,ಯಕ್ಸಂಬಾ (ಮಲ್ಟಿ-ಸ್ಟೇಟ್) ಶಾಖೆ-ಪೊಂಡಾ 195ನೇ ನೂತನ ಶಾಖೆಯನ್ನು ಗೋವಾ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಡಾ॥ ಪ್ರಮೋದ ಸಾವಂತ ಹಾಗೂ ಚಿಕ್ಕೋಡಿ ಲೋಕಸಭಾ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆಯವರು ಉದ್ಘಾಟಿಸುತ್ತಿರುವ ದೃಶ್ಯ.



**ಉದ್ಘಾಟಿಸುತ್ತಿರುವುದು**

ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆಯಲ್ಲಿ ವಿಶೇಷ ಒಲಿಂಪಿಕ್ಸ್ ಭಾರತ್ ಕರ್ನಾಟಕ ಉಡುಪಿ ವಲಯ ಮಟ್ಟದ (ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಉಡುಪಿ) ಇದರ ವಿಶೇಷ ಶಿಕ್ಷಕರ ತರಬೇತಿ ಕಾರ್ಯಾಗಾರ ಸಭೆಯನ್ನು ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆಯವರು ಉದ್ಘಾಟಿಸುತ್ತಿರುವುದು.




**ಉದ್ಘಾಟಿಸುತ್ತಿರುವುದು**

ಸಾಗರ ತಾಲೂಕಿನ ಭೀಮನಕೋಣೆ ಗ್ರಾಮದಲ್ಲಿ ಚೈತನ್ಯ ವಿಶೇಷ ಶಿಕ್ಷಣ ಟ್ರಸ್ಟ (ರಿ) ಮಂಗರವಳ್ಳಿ ಮತ್ತು ಚೈತನ್ಯ ವಿಶೇಷ ಶಿಕ್ಷಣ ಶಾಲೆಯ ದಶಮಾನೋತ್ಸವ ಸಮಾರಂಭ ಹಾಗೂ ಸಂಸ್ಥೆಯ ಲಾಂಛನ ಅನಾವರಣ ಕಾರ್ಯಕ್ರಮವನ್ನು ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಉದ್ಘಾಟಿಸುತ್ತಿರುವ ದೃಶ್ಯ.




**ನೂತನ ಬಜಾರ ಶಾಖೆ ಉದ್ಘಾಟನೆ**

ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿಯಮಿತ., ಯಕ್ಸಂಬಾ ಇದರ ನೂತನ 83ನೇ ಬಜಾರ ಶಾಖೆಯನ್ನು ನಿಪ್ಪಾಣಿಯ ಶ್ರೀ ಹಾಲಸಿದ್ದನಾಥ ಸಹಕಾರಿ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಶ್ರೀ ದತ್ತ ದೇವಸ್ಥಾನ ಮಠ ಅಡಿಯ ಪರಮಾಧಿಕಾರ ಪ.ಪೂ ಪರಮಾತ್ಮರಾಜ ಮಹಾರಾಜರ ದಿವ್ಯ ಸಾನಿಧ್ಯದಲ್ಲಿ ಶ್ರೀ ಜ್ಯೋತಿಪ್ರಸಾದ ಜೊಲ್ಲೆ ಹಾಗೂ ಶ್ರೀ ಬಸವಪ್ರಸಾದ ಜೊಲ್ಲೆಯವರು ಉದ್ಘಾಟಿಸುತ್ತಿರುವುದು.



**ಮಹಾಪರಿನಿರ್ವಾಣ ದಿನ**

ನಿಪ್ಪಾಣಿಯಲ್ಲಿ ಡಾ. ಬಿ. ಆರ್.ಅಂಬೇಡ್ಕರ್ ಮಹಾಪರಿನಿರ್ವಾಣ ದಿನ ನಿಮಿತ್ಯ ಅಂಬೇಡ್ಕರ್ ಪ್ರತಿಮೆಗೆ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದ ದೃಶ್ಯ




**ಉಚಿತ ಗ್ಯಾಸ್ ಸಿಲಿಂಡರ್ ವಿತರಣೆ**

ನಿಪ್ಪಾಣಿಯಲ್ಲಿ 'ಉಜ್ವಲಾ ಯೋಜನೆ'ಯಡಿ ನೂರಕ್ಕೂ ಹೆಚ್ಚು ಫಲಾನುಭವಿಗಳಿಗೆ ಉಚಿತ ಗ್ಯಾಸ್ ಸಿಲಿಂಡರ್‌ಗಳನ್ನು ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ವಿತರಿಸುತ್ತಿರುವ ದೃಶ್ಯ




**ಚಾಲನೆ ನೀಡುತ್ತಿರುವುದು**

ರಾಯಬಾಗದಲ್ಲಿ ಜೊಲ್ಲೆ ಗ್ರೂಪ್ ವತಿಯಿಂದ ಆಯೋಜಿಸಿದ ಪುರುಷ ಮತ್ತು ಮಹಿಳೆಯರ ಎಂ.ಪಿ.ಟ್ರೋಫಿ ಭವ್ಯ ಕಬ್ಬಡ್ಡಿ ಪಂದ್ಯಾವಳಿಗೆ ಬಾವನ ಸೌಂದತ್ತಿಯ ಓಂಕಾರ ಆಶ್ರಮದ ಶ್ರೀ ಶಿವಶಂಕರ ಸ್ವಾಮೀಜಿ, ನಂದಿಕುರಳಿ ಪಂಚಲಿಂಗೇಶ್ವರ ಮಠದ ಶ್ರೀ ವೀರಭದ್ರ ಮಹಾಸ್ವಾಮೀಜಿಗಳ, ಕಬ್ಬೂರ ಗೌರಿ ಶಂಕರ ಮಠದ ರೇವಣಸಿದ್ದ ಮಹಾಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಬಸವಜ್ಯೋತಿ ಯೂಥ್ ಫೌಂಡೇಶನ ಅಧ್ಯಕ್ಷರಾದ ಶ್ರೀ. ಬಸವಪ್ರಸಾದ ಜೊಲ್ಲೆ ಯವರು ಉದ್ಘಾಟಿಸಿ, ಚಾಲನೆ ನೀಡುತ್ತಿರುವುದು.



**ಸಸಿ ನೆಡುತ್ತಿರುವುದು**

ಬೆಳಗಾವಿಯಲ್ಲಿ ಅಧಿವೇಶನದಲ್ಲಿ ಭಾಗಿಯಾಗಿರುವ ಉಭಯ ಸದನಗಳ ಸದಸ್ಯರುಗಳಿಂದ ಪರಿಸರ ಕಾಳಜಿ ಪ್ರತಿಬಿಂಬಿಸಲು, ಅರಣ್ಯ ಇಲಾಖೆಯು ಸುವರ್ಣ ಸೌಧದ ಸುತ್ತಮುತ್ತ ಪ್ರದೇಶದಲ್ಲಿ ಪ್ರತಿಯೊಬ್ಬ ಶಾಸಕರ ಹೆಸರಿನಲ್ಲಿಯೂ 'ಸಸಿ' ನೆಡುವ ಕಾರ್ಯಕ್ರಮದಲ್ಲಿ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಭಾಗವಹಿಸಿ ಸಸಿ ನೆಡುತ್ತಿರುವ ದೃಶ್ಯ.